

## ತನ್ನ ದೇಹ, ತನ್ನ ಮನಸ್ಸು

ಆದರೆ ಮನೋವೈಜ್ಞಾನಿಕ ಅಧ್ಯಯನಗಳ ಪ್ರಕಾರ ಹದಿಹರೆಯದ ಹದಿನಾರರಲ್ಲಿ ಲೈಂಗಿಕ ಬಯಕೆ, ಒಮ್ಮತ ಅಥವಾ ಒಪ್ಪಿಗೆಯ ಲೈಂಗಿಕ ಕ್ರಿಯೆಗಳು ಬೇಜಾವಾಬ್ದಾರಿಯ ವರ್ತನೆಗಳಾಗಿರದು. ವ್ಯಕ್ತಿಯ ಈ ನಿರ್ಧಾರಗಳಲ್ಲಿ ತಾನು ಮಾಡುತ್ತಿರುವ ಕಾರ್ಯದ ಹಿತಾಹಿತಗಳು ಅರಿವು (ಇಂಟೆಲೆಕ್ಟ್) ಮತ್ತು ವಿಶ್ವಾಸ (ಇಮೋಷನ್)ಗಳು ದೃಢವಾಗಿರುತ್ತವೆ. ವೈಯಕ್ತಿಕ ಸ್ವಾಯತ್ತತೆಯನ್ನು ಬೆಂಬಲಿಸುವ ವಲಯಗಳು ಮೆದುಳಿನಲ್ಲಿವೆ ಎನ್ನುವುದನ್ನು ನರವಿಜ್ಞಾನದ ಅಧ್ಯಯನಗಳು ಕೂಡ ಸೂಚಿಸಿವೆ.

ಬಹಳಷ್ಟು ಹದಿಹರೆಯದವರು ಅತಿ ಲೈಂಗಿಕತೆ, ವಿಪರೀತದ ಕಾಮುಕತನದಿಂದಾಗಿ, ಅವಕಾಶಗಳಿದ್ದರೂ ಗಮನಹರಿಸದಿರುವುದಕ್ಕೆ ಈ ಗುಣವೂ ಕಾರಣವೆ. ಕೇವಲ ಕಾಮತೃಪ್ತಿಗಾಗಿ ಎಲ್ಲವನ್ನೂ ಮರೆಯುವ, ಮರೆಮಾಚುವ ಧಾವಂತವಿರದು ಹದಿಹರೆಯರೆಲ್ಲರಲ್ಲಿಯೂ. ಸಹಪಾಠಿಗಳ, ಸಂಗಡಿಗರ ಒತ್ತಡ, ಆಮಿಷ, ಬೆದರಿಕೆಗಳಿಗೆ ಒಳಗಾಗದೇ ತಮ್ಮ ಆಂತರಿಕ ಸರಿ–ತಪ್ಪುಗಳ ಪ್ರಜ್ಞೆಗನುಗುಣವಾಗಿ ವರ್ತಿಸುವುದಕ್ಕೆ ಕಾರಣ ವೈಯಕ್ತಿಕ ಸ್ವಾಯತ್ತತೆ. ಇದರಿಂದಾಗಿಯೇ ತಮ್ಮ ದೇಹ, ತಮ್ಮ ಮನಸ್ಸು ಎನ್ನುವ ಪ್ರಬಲ ರಕ್ಷಣಾ ಭಾವವು ಸಮಯೋಚಿತವಾಗಿ ಮೂಡಿಬರುವುದು. ಲೈಂಗಿಕ ತೃಪ್ತಿಗಿಂತಲೂ ಹೆಚ್ಚಿನದು ಸಾಂಗತ್ಯವೆನ್ನುವ ಭಾವನೆಯು ಗಾಢವಾಗಿರುವ ಹದಿಹರೆಯರ ಲೈಂಗಿಕ ಬಯಕೆಗಳು ವಯಸ್ಕರ ಪಕ್ವತೆಯನ್ನು ಹೋಲುತ್ತದೆ.

ಹದಿಹರೆಯದವರ ಪರಸ್ಪರ ಲೈಂಗಿಕ ಕ್ರಿಯೆಗಳು ಕೇವಲ ಕುತೂಹಲ, ಅವಸರ, ಹೊಣೆಗೇಡಿತನದಿಂದ ಆಗಿರುವುದೆಂಬ ಅಭಿಪ್ರಾಯವು ಬಹಳಷ್ಟು ಹಿರಿಯರಲ್ಲಿರುವುದು ಸಾಮಾನ್ಯ. ಏಕೆಂದರೆ ಲೈಂಗಿಕ ಕುತೂಹಲ, ಕೆರಳಿಕೆ ಅತಿಕಾಮಾಸಕ್ತಿಯು ಒಳಗಿನ ಒತ್ತಡಗಳೊಂದಿಗೆ ಸಮವಯಸ್ಕರು, ಸಹಪಾಠಿಗಳನ್ನು ಮೆಚ್ಚಿಸುವ ಅಥವಾ ಪೈಪೋಟಿಗಾಗಿ ಮಾಡುವ ಭಯಂಕರ ಹುಡುಗಾಟಿಕೆಯಾಗಿದ್ದು ದೀರ್ಘಾವಧಿಯ ದುಷ್ಪರಿಣಾಮಗಳಿಗೆ ಕಾರಣವೆನ್ನುವ ಭಯದಿಂದ ಮೂಡಿರುವ ಪರಿಕಲ್ಪನೆ. ಆದರಿಂದು ಹದಿಹರೆಯದ ಕೊನೆಯ ಹಂತದಲ್ಲಿರುವ ಮಕ್ಕಳು ಶಿಕ್ಷಣ, ಸಾಮಾಜಿಕ ಸಂಪರ್ಕ ಮತ್ತು ಅಂತರ್ಜಾಲದ ಮೂಲಗಳಲ್ಲಿ ಲಭ್ಯವಿರುವ ಮಾಹಿತಿಗಳಿಂದ ಪಡೆದುಕೊಳ್ಳುವ ಅರಿವು ಲೈಂಗಿಕ ಸಂಬಂಧಗಳಲ್ಲಿ ತೊಡಗಿಸಿಕೊಳ್ಳುವ ಮುನ್ನ ಇರಬೇಕಾದ ಮಾನಸಿಕ ಸಿದ್ಧತೆಗಳತ್ತ ಗಮನ ಹರಿಸುವಂತೆ ಮಾಡುತ್ತದೆ. ತನ್ನ ಮನಸ್ಸು, ತನ್ನ ದೇಹ ಎನ್ನುವ ಅರಿವು ಗಟ್ಟಿಯಾಗಿಸುವಂತಹ ಮಾಹಿತಿ, ಅನುಭವಗಳು ಶಾಲಾಕಾಲೇಜಿನ ಪಠ್ಯ, ಪರಿಸರ, ಸಂಗಡಿಗರ ಅನುಭವಗಳ ಮೂಲಕವೂ ಮನಸಿಗೆ ಬಂದಿರುತ್ತವೆ. ಇದರಿಂದಾಗಿಯೂ ಹಿಂದುಮುಂದು ಆಲೋಚಿಸದೆ ಅಪಾಯಕಾರಿ ಲೈಂಗಿಕ ಕ್ರಿಯೆಗಳತ್ತ ತಲೆ ಹಾಕುವವರ ಸಂಖ್ಯೆ ಇಳಿದಿರಬಲ್ಲದು. ಇದನ್ನು ಬೆಂಬಲಿಸಿರುವ ಅಮೆರಿಕದ ಸಮೀಕ್ಷೆಯೊಂದರ ಪ್ರಕಾರ ಲೈಂಗಿಕ ಕುತೂಹಲ, ಕೆರಳಿಕೆ ಮತ್ತು ಕಾಮಾಸಕ್ತಿಯಲ್ಲಿ ಏಕಾಏಕಿ ತೊಡಗಿಸಿಕೊಳ್ಳುವ ಹದಿಹರೆಯದವರ ಸಂಖ್ಯೆ ಇಳಿದಿದೆಯಂತೆ. ಹುಮ್ಮಸ್ಸು, ಗೆಳೆತನ, ಸದವಕಾಶಗಳು ಇದ್ದಾಗಿಯೂ ಲೈಂಗಿಕ ಬಯಕೆ ಬಲವಾಗಿರದೆನ್ನುವ ಅಭಿಪ್ರಾಯ. ಆದರೂ ಹದಿಹರೆಯರೆಲ್ಲರ ಲೈಂಗಿಕ ಬಯಕೆ, ತೃಪ್ತಿಪಡಿಸಿಕೊಳ್ಳುವ ಅವಸರ ಒಂದೇ ನಮೂನೆಯದಾಗಿರದು.




ಮನೆಯ ವಾತಾವರಣ, ಬಾಲ್ಯದ ಮಾನಸಿಕ ಸಮಸ್ಯೆ ಮತ್ತು ವ್ಯಕ್ತಿತ್ವಕ್ಕೆ ಸಂಬಂಧಿಸಿದ ತೊಡಕುಗಳು ಅವಸರದ ಲೈಂಗಿಕ ಕ್ರಿಯೆ, ದಬ್ಬಾಳಿಕೆ ಹಿಂಸಾ ಪ್ರವೃತ್ತಿಯನ್ನು ಹೊರತಂದಿರುವ ಪ್ರಕರಣಗಳಿವೆ. ಇಂತಹವರನ್ನು ಅರ್ಥಮಾಡಿಕೊಳ್ಳುವ ಪರಿಯಲ್ಲಿ ಹದಿನಾರರ ವಯಸಿಗರ ಪರಸ್ಪರ, ಸಹಮತದ ಲೈಂಗಿಕ ಕ್ರಿಯೆಗಳನ್ನು ಅಪರಾಧವೆಂದು ನಿಯಂತ್ರಿಸುವ ಕ್ರಮ ಹದಿಹರೆಯದ ಸ್ವಾತಂತ್ರ್ಯ ಹರಣವಷ್ಟೇ. ■